ಸಿ. ಸಿ. ನಂ.- **328/2018**

ಡಿ. ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **09-10-2024** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ- ಆರೋಪಿ ಪರ ವಕೀಲರಿಂದ -

ನನ್ನ ಚೆಕ್ ಬುಕ್ ಈಗಲೂ ಮಹೆಬೂಬ ಭಾಷಾ ಮತ್ತು ದೂರುದಾರ ರಿಹಾನಾ ಭಾಷಾರವರ ಬಳಿ ಇರುತ್ತದೆ. ನಾನು ಈ ಕಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೆನೆ.

ಸಿಸಿ ನಂ **840/2020** ರ ನ ಆದೇಶದ ಪುಟದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**1** ಎಂದು, ಸದರಿ ಪ್ರಕರಣದಲ್ಲಿನ ಪ್ರ.ವ.ವ ಯ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**2** ಎಂದು, ಸದರಿ ಪ್ರಕರಣದಲ್ಲಿನ ದೂರಿನ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**3** ಎಂದು, ಸದರಿ ಪ್ರಕರಣದಲ್ಲಿ ಪಿರ್ಯಾಧಿಯ ಮರು ಹೇಳಿಕೆಯ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**4** ಎಂದು, ಪಂಚನಾಮೆಯ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**5** ಎಂದು, ಸದರಿ ಪ್ರಕರಣದಲ್ಲಿನ **14** ಪುಟಗಳ ಅಂತಿಮ ವರದಿಯ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-**6** ಎಂದು, ಸದರಿ ಪ್ರಕರಣದಲ್ಲಿ ಹೆಚ್ಚುವರಿ ಕಲಂ ಮತ್ತು ಹೆಚ್ಚುವರಿ ಆರೋಪಿತರನ್ನು ಸೇರ್ಪಡೆ ಮಾಡುವ ಕುರಿತು ನೀಡಿದ ಮನವಿಯ ದೃಡೀಕೃತ ಪ್ರತಿ ಹಾಜರುಪಡಿಸಿದ್ದೇನೆ. ಅದನ್ನು ನಿಡಿ-7 ಎಂದು ಗುರುತಿಸಲಾಯಿತು.

(ದೂರುದಾರರ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.